ಅಂತಹುದರಲ್ಲಿ ಒಂದು.) ಹೊಸ ಕೆರೆಗಳ ಕಟ್ಟಿಸಲು ಸೂಕ್ತ ಸ್ಥಳ ಹುಡುಕತೊಡಗಿದರು.

ಬ್ರಿಟಿಷ್ ಸೇನೆ, ಅಧಿಕಾರಿಗಳು ಬೀಡುಬಿಟ್ಟಿದ್ದ ಕಂಟೋನ್ಮೆಂಟ್ ಪ್ರದೇಶವು ಹಲಸೂರು ಕೆರೆ ಮತ್ತದರ ಸುತ್ತಣ ಬಾವಿಗಳನ್ನೇ ನೆಚ್ಚಬೇಕಾಗಿತ್ತು. ಬೇಸಿಗೆ ಬಂತೆಂದರೆ ನೀರಿನ ಕೊರತೆ ಮಿತಿ ಮೀರುತ್ತಿತ್ತು. ಬೆಂದಕಾಳೂರು ಜನರನ್ನು ಬೇಯಿಸುತ್ತಿತ್ತು. ಲಭ್ಯವಿದ್ದ ನೀರಿನ ಗುಣಮಟ್ಟವೂ ಆರೋಗ್ಯಕರವಾಗಿರಲಿಲ್ಲ. 'ಓಡುವ ಕುದುರೆ ಮೇಲಿಂದ ಬಿದ್ದು ಸತ್ತವರನ್ನ ಬಿಟ್ರೆ ಬೆಂಗ್ಳೂರಿನ ಉಳಿದ ಜನ ಗಬ್ಬು ನೀರು ಕುಡಿದು ಡಾಕ್ಟ್ರ ಕೈಯಲ್ಲೆ ಸಾಯಬೇಕು' ಎಂಬ ಆಕ್ರೋಶದ ಮಾತು ಕೇಳಿಬರುತ್ತಿತ್ತು. ಇದಕ್ಕೆಲ್ಲ ಉತ್ತರವೋ ಎಂಬಂತೆ ಹೊಸ ಕೆರೆ ಕಟ್ಟಲು, ಈಗಾಗಲೇ ಇರುವ ಕೆರೆಗಳ ನಡುವಿನ ಕೋಡಿ ಸಂಪರ್ಕ ನವೀಕರಿಸಲು, ಕಲುಷಿತ ನೀರು ಕೆರೆಗೆ ಮಿಶ್ರವಾಗದಿರಲು ಸ್ಯಾಂಕಿ ಯೋಜನೆ ರೂಪಿಸತೊಡಗಿದರು. ಕಂಟೋನ್ಮೆಂಟಿನ ಬಳಕೆಗಾಗಿಯೇ ನೀರಿನ ಸಂಗ್ರಹಾಗಾರ ಕಟ್ಟಲು ತಯಾರಿ ನಡೆಸಿದರು.

ಆದರೆ ಕೆರೆ ನಿರ್ಮಾಣ/ದುರಸ್ತಿಯ ಕೆಲಸ ಕೈಗೆತ್ತಿಕೊಳ್ಳಲು ಒಮ್ಮೆಲೇ ಸರ್ಕಾರದಿಂದ ಅನುಮೋದನೆ ದೊರೆಯದ ಕಾರಣ ಇತರ ವಿಷಯಗಳೆಡೆ ಗಮನ ಹರಿಸಿದರು. ಬೆಳೆಯುತ್ತಿದ್ದ ಬೆಂಗಳೂರು ಪೇಟೆ ಮತ್ತು ಕಂಟೋನ್ಮೆಂಟ್ ನಡುವೆ 300 ಎಕರೆ ಖಾಲಿ ಜಾಗವಿತ್ತು. ತಾವು ಬರೆಯುತ್ತಿದ್ದ ಜಲವರ್ಣ ಚಿತ್ರಗಳ ಉದ್ಯಾನವನಗಳಂತಹುದೇ ಒಂದನ್ನು ಬೆಳೆಸುವ ಯೋಜನೆ ಹಾಕಿದರು. 1864ರಲ್ಲಿ ಮೈಸೂರಿನ ಕಮಿಷನರ್ ಮಾರ್ಕ್ ಕಬ್ಬನ್ ಹೆಸರಿನಲ್ಲಿ ಉದ್ಯಾನವನ ನಿರ್ಮಾಣಗೊಂಡಿತು. ಅದೇ ವರ್ಷ ಸೇಂಟ್ ಆಂಡ್ರ್ಯೂ ಕೆಥೆಡ್ರಲ್, ಈಸ್ಟ್ ಪರೇಡ್ ಚರ್ಚ್ ನಿರ್ಮಾಣವಾದವು.

ನ್ಯಾಯಾಲಯ ಸಮುಚ್ಚಯಕ್ಕಾಗಿ ಅವರು ಮಾಡಿದ ವಿನ್ಯಾಸವು ಆಕರ್ಷಕ ಕಟ್ಟಡವಾಗಿ ಮೇಲೆದ್ದಿತು. ಕಂಟ್ರಾಕ್ಟರುಗಳಾದ ನಾರಾಯಣ ಸ್ವಾಮಿ ಮೊದಲಿಯಾರ್, ಬನ್ಸಿಲಾಲ್ ಅಭಿರ್ ಚಂದ್ ಮತ್ತು ವ್ಯಾಲೇಸ್ ಅಂಡ್ ಕಂಪನಿಯ ಸಹಕಾರದಿಂದ 1868ರಲ್ಲಿ 'ಅಠಾರಾ ಕಚೇರಿ' ನಿರ್ಮಾಣವಾಯಿತು. ಸರ್ಕಾರಿ ಆಡಳಿತ ಕಚೇರಿಗಾಗಿಯೇ ಒಂದು ಕಟ್ಟಡ ಬೇಕಿತ್ತು. ಮಂಜೂರಾದ ಸ್ಥಳದಲ್ಲಿ ನೀರ ಕಾಲುವೆಗಳು, ಬಂಡೆಗಳು ತುಂಬಿ ಕಟ್ಟಡ ರೂಪಿಸುವುದು ಸಾಹಸವೇ ಆದರೂ ಅದರ ವಿನ್ಯಾಸ ರೂಪಿಸಿದ ಸ್ಯಾಂಕಿ ಅವರು 1870ರಲ್ಲಿ ನಿರ್ಮಾಣ ಆರಂಭಿಸಿದರು. 'ಸೂರ್ಯ ಬೆಳಗುವಷ್ಟು ಕಾಲವೂ ಬ್ರಿಟನ್ ದೇಶ ಭಾರತವನ್ನು ತನ್ನ ಸುಪರ್ದಿಯಲ್ಲಿಟ್ಟುಕೊಂಡಿರಬೇಕು' ಎಂದಿದ್ದ ಗವರ್ನರ್ ಜನರಲ್ ಲಾರ್ಡ್ ಮೇಯೋನನ್ನು ಅಂಡಮಾನಿಗೆ ಭೇಟಿ ಕೊಟ್ಟ ಸಂದರ್ಭದಲ್ಲಿ ಅಫ್ಘನ್ನನಾದ ಶೇರ್ ಅಲಿ ಕೊಂದಿದ್ದ. ಲಾರ್ಡ್ ಮೇಯೋ ಹೆಸರನ್ನು ಬೆಂಗಳೂರಿನ ಆಡಳಿತ ಕಚೇರಿ ಕಟ್ಟಡಕ್ಕೆ ಬಳಿಕ ಇಡಲಾಯಿತು. 'ಮೇಯೋ ಹಾಲ್' ಜನಾಕರ್ಷಣೆಯ ಕೇಂದ್ರವಾಯಿತು.

## ವಸ್ತು ಸಂಗ್ರಹಾಲಯ

ಭಾರತದ ಇತಿಹಾಸವನ್ನು ಸಾಕ್ಷ್ಯಾಧಾರಗಳ ಮೂಲಕ ತಿಳಿಯಲು ಇತಿಹಾಸಾಸಕ್ತ ಭಾರತೀಯರು ಮತ್ತು ಬ್ರಿಟಿಷರಿಂದ ಸಂಶೋಧನೆ, ಅಧ್ಯಯನಗಳು ನಡೆಯತೊಡಗಿದ್ದವು. ಸ್ಯಾಂಕಿಯಷ್ಟೇ ಅಲ್ಲ, ಹಲವು ಬ್ರಿಟಿಷ್ ಅಧಿಕಾರಿಗಳು ತಾವಿರುವ ಕಡೆಗಳಲ್ಲೆಲ್ಲ ಶೋಧ, ಸಂಗ್ರಹ ಮಾಡಿ ಪ್ರಾಚೀನ ವಸ್ತುಗಳು, ಶಾಸನಗಳು, ನಾಣ್ಯಗಳನ್ನು ಸಂಗ್ರಹಿಸಿದ್ದರು. ಬೆಲೆ ಕಟ್ಟಲಾಗದ ಪುರಾತತ್ವ ವಸ್ತುಗಳನ್ನು ಕೆಲವರು ತಮ್ಮ ವೈಯಕ್ತಿಕ ಸಂಗ್ರಹಕ್ಕೆ ಸೇರಿಸಿಕೊಂಡರೆ, ಹಲವನ್ನು ಇಂಗ್ಲೆಂಡಿಗೆ ಸಾಗಿಸಿದರು. ಅಂತೂ ಸಂಗ್ರಹಿಸಿದ ವಸ್ತುಗಳನ್ನಿಡಲು ವಿಶಾಲ ಕಟ್ಟಡಗಳು ಬೇಕಿದ್ದವು.

ಮದರಾಸಿನ ಸರ್ಜನ್ ಎಡ್ವರ್ಡ್ ಬಾಲ್‌ಫೋರ್ 1851ರಲ್ಲಿ ದಕ್ಷಿಣ ಭಾರತದ ಮೊತ್ತಮೊದಲ ವಸ್ತುಸಂಗ್ರಹಾಲಯವನ್ನು ಮದರಾಸಿನಲ್ಲಿ ಆರಂಭಿಸಿದ್ದರು. ಮದರಾಸಿನಂತೆ ಬೆಂಗಳೂರಿನಲ್ಲಿಯೂ 1865ರಲ್ಲಿ ವಸ್ತುಸಂಗ್ರಹಾಲಯ ರೂಪುಗೊಂಡಿತು.



ಪುರಾತತ್ವ ಇಲಾಖೆಯಲ್ಲಿ ಸಂರಕ್ಷಿಸಲಾದ ಶಾಸನ

ಬೆಂಗಳೂರಿನ ಮುಖ್ಯ ಆಯುಕ್ತರಾಗಿದ್ದ ಎಲ್.ಬಿ. ಬೌರಿಂಗ್ ನೆರವಿನೊಂದಿಗೆ ಬಾಲ್‌ಫೋರ್ ನೇತೃತ್ವದಲ್ಲಿ ಹಳೆಯ ಜೈಲು ಕಟ್ಟಡದಲ್ಲಿ ಸಂಗ್ರಹಾಲಯ ಆರಂಭವಾಯಿತು. 'ಮೈಸೂರು ಸರ್ಕಾರಿ ಮ್ಯೂಸಿಯಂ' ಎಂದೇ ಹೆಸರಾಯಿತು. ಆದರೆ ಪ್ರಾಚೀನ ವಸ್ತುಗಳನ್ನು ಪ್ರದರ್ಶಿಸಲು ಜೈಲು ಕಟ್ಟಡ ಸೂಕ್ತವಾಗಿರಲಿಲ್ಲ ಮತ್ತು ಅದು ತುಂಬಿ ಹೋಗಿ ಸ್ಥಳಾವಕಾಶ ಇಲ್ಲವಾಗಿತ್ತು. ಆಗ ಮೈಸೂರು ರಾಜ್ಯದ ಎಂಜಿನಿಯರರಾದ ಸ್ಯಾಂಕಿ ಹೊಸ ಕಟ್ಟಡದ ವಿನ್ಯಾಸವನ್ನು ಸಿದ್ಧಗೊಳಿಸಿದರು. 1877ರ ವೇಳೆಗೆ ಈಗಿನ ಕಸ್ತೂರಬಾ ರಸ್ತೆಯಲ್ಲಿ (ಮೊದಲು ಸಿದ್ದಿ ರಸ್ತೆ) ಸರ್ಕಾರಿ ವಸ್ತು ಸಂಗ್ರಹಾಲಯ ನಿರ್ಮಾಣ ಪೂರ್ಣಗೊಂಡಿತು.

ಸ್ಯಾಂಕಿಯವರ ಕನಸಿನ ವಿನ್ಯಾಸದಂತೆ ರೂಪುಗೊಂಡ ಕಟ್ಟಡದಲ್ಲಿ ಎರಡು ಪ್ರದರ್ಶನ ಮಹಡಿಗಳಿದ್ದವು. 70 ವರ್ಣಚಿತ್ರಗಳು, 84 ಶಿಲ್ಪಗಳು, ನೂರಾರು ವಸ್ತುಗಳಿದ್ದವು. ಕೆಲವು ವಸ್ತುಗಳಂತೂ 5000 ವರ್ಷಗಳಷ್ಟು ಹಳೆಯವು. ಚಂದ್ರವಳ್ಳಿಯಲ್ಲಿ ದೊರೆತ ನವಶಿಲಾಯುಗದ ಮಡಕೆ ಚೂರು, ಮೊಹೆಂಜದಾರೊವಿನ ವಸ್ತುಗಳು, ಹಳೇಬೀಡು, ವಿಜಯನಗರ ಕಾಲದ ಶಿಲ್ಪ–ಶಾಸನಗಳು, ಮಥುರಾದ ಟೆರ್ರಾಕೋಟಾ, ಕೊಡಗಿನ ಶಸ್ತ್ರಾಸ್ತ್ರಗಳು, ಟಿಪ್ಪುವಿನ ಶ್ರೀರಂಗಪಟ್ಟಣ ಕೋಟೆಯ ಯೋಜನೆಯ ನಕಾಶೆ, ಹಾಸನ ಜಿಲ್ಲೆ ಹಲ್ಮಿಡಿಯಲ್ಲಿ ದೊರೆತ ಐದನೆಯ ಶತಮಾನದ ಕನ್ನಡದ ಶಿಲಾಶಾಸನ, ಅಟಕೂರು ಶಾಸನ, ಬೇಗೂರು ಶಾಸನಗಳೇ ಮೊದಲಾಗಿ ಸಾವಿರಾರು ವಸ್ತುಗಳು ಸಂಗ್ರಹವಾದವು.

ಅದು ಆರಂಭವಾದ ಮೊದಲಿಗೆ 1870ರಲ್ಲಿ 2.8 ಲಕ್ಷ ಜನರು ಬಂದು ನೋಡಿದರು. 20ನೆಯ ಶತಮಾನದ ಆರಂಭದಲ್ಲಿ ವಾರ್ಷಿಕ ಸರಾಸರಿ ನಾಲ್ಕು ಲಕ್ಷದಷ್ಟು ಜನ ಬಂದು ಹೋಗುತ್ತಿದ್ದರು.

## 'ಕೆರೆಯ ನೀರನು ಕೆರೆಗೆ ಹರಿಸಿ'

1876–78ರ ನಡುವೆ ಭಯಾನಕ ಕ್ಷಾಮ ಮೈಸೂರು ರಾಜ್ಯವನ್ನು ಬಾಧಿಸಿತು. ಪ್ರಕೃತಿಯ ಅಸಹಕಾರ ಒಂದೆಡೆ; ವಸಾಹತುಶಾಹಿ ಆಡಳಿತದ ನಿರ್ಲಕ್ಷ್ಯ ಮತ್ತೊಂದೆಡೆ ಸೇರಿ ಮೈಸೂರು ರಾಜ್ಯದ ಕಾಲು ಭಾಗ ಜನರನ್ನು ಕ್ಷಾಮ ಬಲಿ ತೆಗೆದುಕೊಂಡಿತು. ಬೆಂಗಳೂರಿನ ಕೆರೆಗಳ ಬಳಿ ಚರ್ಮ ಹದ ಮಾಡುವ, ಬಣ್ಣ ಹಾಕುವ ಕಾರ್ಯಾಗಾರಗಳಿದ್ದವು. ಒಳಚರಂಡಿಯ ಕಲುಷಿತ ನೀರು, ಮಲಮೂತ್ರಾದಿ ತ್ಯಾಜ್ಯಗಳು ಕೆರೆಗೆ ಸೇರುತ್ತಿದ್ದವು. ಹಬ್ಬದ ಬಳಿಕ ದೇವತಾಮೂರ್ತಿಗಳ ಮುಳುಗಿಸಲೂ ಕೆರೆಗಳು ಬಳಕೆಯಾಗುತ್ತಿದ್ದವು. ಕಲುಷಿತ ನೀರಿನಿಂದ ಕಾಲರಾ, ಅರಿಶಿನ ಕಾಮಾಲೆ, ಟೈಫಾಯ್ಡ್ ಮತ್ತಿತರ ಕಾಯಿಲೆಗಳು ಬರುತ್ತಿದ್ದವು. ಶುದ್ಧ ಕುಡಿಯುವ ನೀರಿಗಾಗಿ ಹೊಸ ಯೋಜನೆ ರೂಪಿಸಲೇಬೇಕಾಯಿತು. ಇತರ ಕಾಮಗಾರಿಗಳ ನಡುವೆ ನನೆಗುದಿಗೆ ಬಿದ್ದಿದ್ದ ಕೆರೆ ಕಟ್ಟುವ ಸ್ಯಾಂಕಿಯವರ ಯೋಜನೆ ಮತ್ತೆ ಚಾಲ್ತಿಗೆ ಬಂತು.

37 ಎಕರೆ ಪ್ರದೇಶದಲ್ಲಿ ಇವತ್ತಿನ ಮಲ್ಲೇಶ್ವರಂ, ವೈಯಾಲಿಕಾವಲ್ ಮತ್ತು ಸದಾಶಿವನಗರಗಳ ನಡುವೆ ಸ್ಯಾಂಕಿ ಯೋಜಿಸಿದ ಕೆರೆ ಹರಡಿಕೊಳ್ಳತೊಡಗಿತು. ಮಳೆ ನೀರನ್ನು ಜಲಮೂಲವನ್ನಾಗಿ ಹೊಂದಿರುವ ಒಂದೂಕಾಲು ಕಿಲೋಮೀಟರ್ ವ್ಯಾಪ್ತಿಯ ಜಲಾನಯನ ಪ್ರದೇಶ ಹೊಂದಿರುವ, ಅತಿ ಹೆಚ್ಚು ಎಂದರೆ 30 ಅಡಿ ಆಳವಿರುವ, 1.7 ಕಿಲೋಮೀಟರು ದಂಡೆ ಹೊಂದಿರುವ ಕೆರೆ ಸಿದ್ಧವಾಗತೊಡಗಿತು. ಮಿಲ್ಲರ್ ಕೆರೆ, ಧರ್ಮಾಂಬುಧಿ ಕೆರೆ, ಮತ್ತಿಕೆರೆ, ಸಂಪಂಗಿ ಕೆರೆ ಮುಂತಾಗಿ ಹಲವು ಕೆರೆಗಳು ಒಂದರೊಡನೊಂದು ಸಂಪರ್ಕ ಹೊಂದಿದವು. (ಮತ್ತಿಕೆರೆಯ ಕೋಡಿ ಸ್ಯಾಂಕಿ ಕೆರೆ ತುಂಬಿಸುತ್ತಿತ್ತು, ಸಂಪಂಗಿ ಕೆರೆಯ ಹೆಚ್ಚುವರಿ ನೀರು ಸ್ಯಾಂಕಿ ಕೆರೆಗೆ ಬರುವಂತೆ ಮಾಡಿದ್ದರು ಎಂದು ಬೆಂಗಳೂರು ಮೂಲವಾಸಿ ಹಿರಿಯರು ನೆನಪಿಸಿಕೊಳ್ಳುತ್ತಾರೆ.) ಕೆರೆಯ ಪಕ್ಕವೇ